

ಆಶಾ ಜಗದೀಶ್

# ಕಾಣೆಯಾದವರು

"ಮೇಡಂ, ನೀವು ಚಾರ್ಜ್ ತಗೊಂಡಿದೀರಿ ಅಂತ ಹೇಳ್ತಿದೀನಿ, ಯಾರಾದ್ರೂ ಸುಮ್ ಸುಮ್ನೆ ಪೀರಿಯಡ್ಸ್ ಅಂತ ಹೇಳಿ ಮನೆಗೆ ಹೋಗ್ತೀವಂದ್ರೆ ಬಿಡ್ಲಿಕ್ ಹೋಗ್ಬೇಡಿ. ಮತ್ತೆ ಎಲ್ಲೆ ಉಸಾಬರಿ. ಲಾಸ್ಟ್ ಇಯರ್‌ನಲ್ಲಿ ಹೀಗೆ ಒಂದು ಹುಡ್ಗಿ ಮನೆಗ್ ಹೋಗ್ತೀನಂತ ಕೇಳ್ಕೊಂಡು ಹೋದವಳು ಯಾರ್ದೋ ಜೊತೆ ಓಡ್ಹೋಗ್ಬಿಟ್ಟಿದ್ಲು. ನೀವು ಸ್ವಲ್ಪ ಹುಷಾರು..." ಎಂದ ಸಹೋದ್ಯೋಗಿಯ ಮಾತು ಕೇಳಿ ಏನು ಮಾಡುವುದೋ ತಿಳಿಯದಾಯಿತು. ಅವರೊಳಗೊಬ್ಬಳಾದ ನನ್ನನ್ನು ನಾನು ಹೊರಗಿಟ್ಟು ನೋಡುವುದು ನನಗಾದರೂ ಹೇಗೆ ಸಾಧ್ಯ.

ಬಾಲ್ಯದಲ್ಲಿ ಅಕ್ಕಂದಿರೆಲ್ಲರೂ ಅವರೊಂದಿಗೆ ಆಡಿಕೊಂಡು ಬೆಳೆಯುತ್ತಿದ್ದ ನಮ್ಮನ್ನು ಬಿಟ್ಟು ಇದ್ದಕ್ಕಿದ್ದಂತೆ ಕಾಣೆಯಾಗಿಬಿಡುತ್ತಿದ್ದರು. ಈ ಕಾಣೆಯಾಗುವಿಕೆ ಯಾಕೆ ಎನ್ನುವ ಗುಮಾನಿ ನಮ್ಮಂತಹ ಪುಟ್ಟಬಾಲೆಯರನ್ನು ಕಾಡುತ್ತಿತ್ತು. ಈ ಸಂಗತಿ ನಮ್ಮ ಗೆಳತಿಯರು ಎಂಬ ಎಂಟ್ಹತ್ತು ಜನರ ಗುಂಪಿನಲ್ಲಿ ಪ್ರಸ್ತಾಪವಾದಾಗ ಎಲ್ಲರಲ್ಲೂ ಎಂಥದೋ ಹಿಂಜರಿಕೆ. ಚರ್ಚೆಯ ಬಳಿಕ ಅದು ನಮ್ಮೊಬ್ಬರದೇ ಸಮಸ್ಯೆಯಲ್ಲ, ಎಲ್ಲರದ್ದೂ ಅದೇ ಗೋಳು ಎಂಬ ಅಂತಿಮ ತೀರ್ಮಾನಕ್ಕೆ ನಾವೆಲ್ಲರೂ ಬಂದೆವು. ನಾವೂ ಅದೇ ಅಕ್ಕಂದಿರ ಮುಂದಿನ ಸಾಲೆನ್ನುವುದನ್ನು ತಿಳಿಯದ ಮುಗ್ಧ ತಿಳಿವಿನಲ್ಲಿ ಆ ಚರ್ಚೆ ನಡೆದಿತ್ತು.

ದೊಡ್ಡವವರ ಬಾಯಲ್ಲಿ ಒಂದಿಲ್ಲೊಂದು ರೀತಿಯಲ್ಲಿ "ಹೆಣ್ಣು ಹುಡುಗಿ ಹೆಂಗಿರಬೇಕು ನೀನು", "ಹುಡ್ಗಿ ಆಗಿ ಹಂಗೆಲ್ಲ ಮಾಡಾಕೆ ನಾಚ್ಗೆ ಆಗಲ್ಲ", "ಗಂಡುಬೀರಿ ಹಂಗೆ ಬೀದಿ ಬೀದಿ ಸುತ್ತುತೀಯ", "ಅವನೇನೋ ಹುಡುಗ... ನೀನು?!" ಅಲ್ಲಿ ಕೂರಬೇಡ ಇಲ್ಲಿ ನಿಲ್ಲಬೇಡ, ಅವ್ರನ್ನ ಮಾತಾಡಿಸ್ಬೇಡ, ಜೋರಾಗಿ ನಗಬೇಡ, ಗಂಡನ ಮನೆಗೆ ಹೋಗಿ ನಮ್ ಮಾನ ತೆಗಿತೀಯ... ಉಸ್ಸಪ್ಪಾ... ಇಂಥ ಈ ಕ್ಷಣಕ್ಕೆ ನೆನಪಿಗೆ ಬಾರದ ಅದೆಷ್ಟೋ ನುಡಿಗಟ್ಟುಗಳು ಸಲೀಸಾಗಿ ಉರುಳುತ್ತಿದ್ದವು. ನಮ್ಮ ನಡೆನುಡಿಗಳು ರೆಕ್ಕೆ ಕಳೆದುಕೊಂಡ ಹಕ್ಕಿಗಳಂತೆ ದಿನೇ ದಿನೇ ಸ್ವಚ್ಛಂದತೆ ಕಳೆದುಕೊಳ್ಳುತ್ತಿರುವುದರ ಅರಿವು ನಮಗಿರಲಿಲ್ಲ. ಪ್ರಪಂಚ ತಾನು ಸೃಷ್ಟಿಸಿಕೊಂಡಿರುವ ಕಟ್ಟಳೆಗಳ ದಾಟಿ ಬೆಳೆಯಲಿಕ್ಕೆ ಕೊಡದು ಎಂಬುದನ್ನು ತಿಳಿಯಲಿಕ್ಕೆ ಸಮಯವಿತ್ತು. ಆದರೆ ತಿಳಿದುಕೊಳ್ಳುವುದಕ್ಕೂ ಅದೇ ಆಗಿಬಿಡುವುದಕ್ಕೂ ಎಷ್ಟೋ ವ್ಯತ್ಯಾಸವಿರುತ್ತದೆ. ನಮಗೆ ಆಗಿ ಗೊತ್ತಿಲ್ಲದಿದ್ದರಿಂದಲೇ ಅದು ಮತ್ತದರ ಚರ್ಚೆ ರೋಚಕ ವಿಚಾರವಾಗಿ ವಿನಿಮಯಗೊಳ್ಳುತ್ತಿದ್ದವೇನೋ.

ತಾತನೂರಿಗೆ ಹೋಗುವುದು ಎಂದರೆ ಒಂದು ಕಾಲದಲ್ಲಿ ಅದೆಷ್ಟೋ ಇಷ್ಟದ,